**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ.<br>(ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 103 (32) |
| ಉತ್ತರಿಸಬೇಕಾದ ದಿನಾಂಕ | : | 17.08.2026 |
| ಉತ್ತರಿಸಬೇಕಾದ ಸಚಿವರು | : | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

******

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಯಾವ ವರ್ಷದಲ್ಲಿ ಸ್ಥಾಪನೆಯಾಯಿತು ಹಾಗೂ ಪ್ರಸ್ತುತ ಈ ಮಂಡಳಿಯ ಮೂಲಕ ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿರುವ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಕಾಯ್ದೆ ಹಾಗೂ ನಿಯಮಗಳು ಯಾವುವು; (ವಿವರ ನೀಡುವುದು); | • ಕರ್ನಾಟಕ ಸರ್ಕಾರವು 21.09.1974 ರಂದು ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ 1974 (ಸಂಕ್ಷಿಪ್ತವಾಗಿ ಜಲ ಕಾಯ್ದೆ) ಅಧಿನಿಯಮ 4ರ ಅಡಿಯಲ್ಲಿ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ"ಯನ್ನು ಸ್ಥಾಪಿಸಿದೆ.<br><br>**ಪ್ರಮುಖ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಕಾಯ್ದೆಗಳು.**<br><br>• ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974, ತಿದ್ದುಪಡಿ 1988 ಮತ್ತು ಅದರ ಅಡಿ ರಚಿತ ನಿಯಮಗಳು.<br>• ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1981 ಮತ್ತು ಅದರ ಅಡಿ ರಚಿತ ನಿಯಮಗಳು.<br>• ಪರಿಸರ (ಸಂರಕ್ಷಣೆ) ಕಾಯ್ದೆ, 1986 ಮತ್ತು ಕಾಯ್ದೆಯ ಅಡಿ ರಚಿತ ನಿಯಮಗಳು/ಅಧಿಸೂಚನೆಗಳು.<br>• ಸಾರ್ವಜನಿಕ ಹೊಣೆಗಾರಿಕಾ ವಿಮಾ ಕಾಯ್ದೆ, 1991.<br><br>**ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಅಡಿ ಮಂಡಳಿಯಿಂದ ಈ ಕೆಳಗಿನ ನಿಯಮ ಮತ್ತು ಅಧಿಸೂಚನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:**<br>• ಅಪಾಯಕಾರಿ ಮತ್ತು ಇತರ ತ್ಯಾಜ್ಯ (ನಿರ್ವಹಣೆ ಮತ್ತು ಅಂತರಗಡಿ ಸಂಚಲನೆ) ನಿಯಮಗಳು, 2016 ಮತ್ತು ಅದರ ತಿದ್ದುಪಡಿಗಳು.<br>• ಅಪಾಯಕಾರಿ ರಾಸಾಯನಿಕ ಉತ್ಪಾದನೆ, ಸಂಗ್ರಹಣೆ ಮತ್ತು ಆಮದು ನಿಯಮಗಳು, 1989 (ತಿದ್ದುಪಡಿ 2000).<br>• ಜೈವಿಕ-ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಮತ್ತು ಅದರ ತಿದ್ದುಪಡಿಗಳು. |

| | | |
|---|---|---|
| | | • ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಮತ್ತು ಅದರ ತಿದ್ದುಪಡಿಗಳು.<br>• ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016.<br>• ಶಬ್ದ ಮಾಲಿನ್ಯ (ಹತೋಟಿ ಮತ್ತು ನಿಯಂತ್ರಣ) ನಿಯಮಗಳು, 2000, (ತಿದ್ದುಪಡಿ 2002 ಮತ್ತು 2006).<br>• ಬ್ಯಾಟರಿ ತ್ಯಾಜ್ಯ ನಿರ್ವಹಣಾ ನಿಯಮಗಳು, 2022.<br>• ಅಪಾಯಕಾರಿ ಸೂಕ್ಷ್ಮಾಣು ಜೀವಿಗಳು, ತಳಿಯವಾಗಿ ವಿನ್ಯಾಸಿಸಿದ ಏಕಾಣು ಜೀವಿಗಳು ಅಥವಾ ಕೋಶಗಳ ಉತ್ಪಾದನೆ, ಬಳಕೆ, ಆಮದು, ರಫ್ತು ಮತ್ತು ಸಂಗ್ರಹಣೆ ನಿಯಮಗಳು, 1989.<br>• ಇ-ತ್ಯಾಜ್ಯ (ನಿರ್ವಹಣೆ) ನಿಯಮಗಳು, 2016 ಮತ್ತು ಅದರ ತಿದ್ದುಪಡಿಗಳು.<br>• ಕಟ್ಟಡ ನಿರ್ಮಾಣ ಮತ್ತು ಧ್ವಂಸ ತ್ಯಾಜ್ಯ ನಿರ್ವಹಣಾ ನಿಯಮಗಳು, 2016.<br>• ಪರಿಸರ ಪ್ರಭಾವದ ಮೌಲ್ಯ ನಿರ್ಧಾರಣ (EIA) ಅಧಿಸೂಚನೆ, 2006.<br>• ಕಲ್ಲಿದ್ದಲು ಮತ್ತು ಲಿಗ್ನೈಟ್ ಆಧಾರಿತ ಶಾಖ ವಿದ್ಯುತ್ ಸ್ಥಾವರಗಳಿಂದ ಬೂದಿ ಬಳಕೆಯ ಕುರಿತು ಅಧಿಸೂಚನೆ ದಿನಾಂಕ 31.12.2021 ಮತ್ತು ತಿದ್ದುಪಡಿ ದಿನಾಂಕ 30.12.2022. |
| ಆ) | ಈ ಮಂಡಳಿಯ ಕಾರ್ಯವ್ಯಾಪ್ತಿಗೆ ಬರುವ ರಾಜ್ಯದ ಒಟ್ಟು ಕೈಗಾರಿಕೆಗಳು, ಸ್ಥಳೀಯ ಸಂಸ್ಥೆಗಳು, ವಾಣಿಜ್ಯ ಮತ್ತು ಮೂಲಭೂತ ಸೌಕರ್ಯ ಯೋಜನೆಗಳು, ಗಣಿಗಾರಿಕೆ, ಜಲ್ಲಿ ಕ್ರಷರ್ ಹಾಗೂ ವಸತಿ ಸಮುಚ್ಛಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು); | ಮಂಡಳಿಯ ಕಾರ್ಯವ್ಯಾಪ್ತಿಗೆ ಬರುವ ಕೈಗಾರಿಕೆಗಳು ಒಟ್ಟು 1. ಕೈಗಾರಿಕೆಗಳು-28875<br>2.ಸ್ಥಳೀಯ ಸಂಸ್ಥೆಗಳು -295<br>3.ವಾಣಿಜ್ಯ ಮತ್ತು ಮೂಲಭೂತ ಸೌಕರ್ಯ ಯೋಜನೆಗಳು-2195<br>4.ಗಣಿಗಾರಿಕೆ -274<br>5. ಜಲ್ಲಿ ಕ್ರಷರ್ -2689<br>6. ವಸತಿ ಸಮುಚ್ಛಯಗಳು-3430<br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ. |
| ಇ) | ಮಂಡಳಿಯ ಸುಗಮ ಕಾರ್ಯನಿರ್ವಹಣೆಗೆ ಇರುವ ಜಿಲ್ಲಾ ಮತ್ತು ಪ್ರಾಂತೀಯ ಕಚೇರಿಗಳ ಸಂಖ್ಯೆ ಎಷ್ಟು; ಒಂದೇ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ತೆರೆಯಲು ಅನುಸರಿಸಲಾದ ಮಾನದಂಡಗಳೇನು; ಹಾಗೂ ಬೆಂಗಳೂರು ಹೊರತುಪಡಿಸಿ ಕೆಲಸದ ಒತ್ತಡ ಹೆಚ್ಚಿರುವ ಇತರೆ ಜಿಲ್ಲೆಗಳಲ್ಲಿ ಹೊಸ ಕಚೇರಿಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಪ್ರಸ್ತುತ ಮಂಡಳಿಯಲ್ಲಿ ಸುಗಮ ಕಾರ್ಯನಿರ್ವಹಣೆಗೆ 45 ಪ್ರಾದೇಶಿಕ ಕಛೇರಿಗಳು, 12 ವಲಯ ಕಛೇರಿಗಳು ಮತ್ತು 02 ಕೇಂದ್ರೀಯ ಪರಿಸರ ಪ್ರಯೋಗಾಲಯ ಮತ್ತು 07 ಪ್ರಾದೇಶಿಕ ಪ್ರಯೋಗಾಲಯಗಳು ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿವೆ.<br>ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಕಛೇರಿಗಳನ್ನು ತೆರೆಯಲು ಕಾರ್ಖಾನೆಗಳ ಸಂಖ್ಯೆ ಮಾಲಿನ್ಯದ ತೀವ್ರತೆ ಮಾನದಂಡವಾಗಿರುತ್ತದೆ.<br>ಬೆಂಗಳೂರು ಹೊರತುಪಡಿಸಿ ಕೆಲಸದ ಒತ್ತಡ ಹೆಚ್ಚಿರುವ ಜಿಲ್ಲೆಗಳಲ್ಲಿ ಹೊಸ ಕಛೇರಿಗಳನ್ನು ತೆರೆಯುವ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಈ) | ಮಂಡಳಿಯಲ್ಲಿ ಮಂಜೂರಾಗಿರುವ ವೃಂದವಾರು ಹುದ್ದೆಗಳ ಸಂಖ್ಯೆ ಎಷ್ಟು; ಮತ್ತು ಇವುಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು; ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ದಿನಾಂಕ: 01.08.2026ಕ್ಕೆ ಒಟ್ಟು 723 ಹುದ್ದೆಗಳು ಮಂಜೂರಾಗಿದೆ. ಇವುಗಳಲ್ಲಿ 474 ಖಾಲಿ ಹುದ್ದೆಗಳಿರುತ್ತವೆ. ವೃಂದಾವಾರು ವಿವರಗಳನ್ನು **ಅನುಬಂಧ-02** ರಲ್ಲಿ ಲಗತ್ತಿಸಿದೆ. ಸರ್ಕಾರದಿಂದ ಅನುಮೋದನೆಗೊಂಡ 152 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಉ) | ಮಂಡಳಿಯಲ್ಲಿ ಹೊರಗುತ್ತಿಗೆ (Outsourcing) ಮತ್ತು ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಯಾವ ವರ್ಷದಿಂದ ನೇಮಿಸಿಕೊಳ್ಳಲಾಗುತ್ತಿದೆ ಹಾಗೂ ಇದಕ್ಕೆ ಸರ್ಕಾರದ ಅನುಮೋದನೆ ಪಡೆಯಲಾಗಿದೆಯೇ; ಈ ನೇಮಕಾತಿಗಳಲ್ಲಿ ನಿಗದಿತ ತಾಂತ್ರಿಕ/ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಲಾಗಿದೆಯೇ; | • ಹೊರಗುತ್ತಿಗೆ ಸಿಬ್ಬಂದಿಗಳನ್ನು ಮಂಡಳಿಯಲ್ಲಿ ಅವಶ್ಯಕತೆಗೆ ಅನುಸಾರವಾಗಿ 2002ನೇ ಇಸವಿಯಿಂದ ವಾರ್ಷಿಕವಾಗಿ ಟೆಂಡರ್ ಕರೆದು ಆಯ್ಕೆ ಮಾಡಿ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗುತ್ತಿದೆ.<br>• ಹೊರಗುತ್ತಿಗೆ ಸಿಬ್ಬಂದಿಗಳನ್ನು ಮಂಡಳಿಗೆ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ನೇಮಿಸಿಕೊಳ್ಳಲಾಗುತ್ತಿದೆ. ಹೊರಗುತ್ತಿಗೆ ಸಿಬ್ಬಂದಿಗಳನ್ನು ಮಂಡಳಿಯ ವೃಂದ & ನೇಮಕಾತಿ ನಿಯಮಾವಳಿಗಳ ಅನ್ವಯ ತಾಂತ್ರಿಕ/ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಲಾಗಿದೆ.<br>• ಮಂಡಳಿಯಲ್ಲಿ ಹಲವು ಗುತ್ತಿಗೆ ನೌಕರರು 2002ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದು, ಕಾಲಕಾಲಕ್ಕೆ ಮಂಡಳಿ ಸಭೆಯ ಅನುಮೋದನೆ ಪಡೆದು ಗುತ್ತಿಗೆ ಅವಧಿಯನ್ನು ನವೀಕರಿಸಲಾಗುತ್ತಿದೆ.<br>ಗುತ್ತಿಗೆ ನೇಮಕಾತಿಗಳಿಗೆ ಮಂಡಳಿಯ 1992ರ ವೃಂದ & ನೇಮಕಾತಿ ನಿಯಮಾವಳಿಗಳ ಅನ್ವಯ ತಾಂತ್ರಿಕ/ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಲಾಗಿದೆ. |
| ಊ) | ಮಂಡಳಿಯಲ್ಲಿ ಧೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ/ಹೊರಗುತ್ತಿಗೆ ಸಿಬ್ಬಂದಿಗಳ ಸೇವಾವಧಿಯನ್ನು ಪರಿಗಣಿಸಿ, ಅವರನ್ನು ಖಾಯಂಗೊಳಿಸುವ ಅಥವಾ ಅವರಿಗೆ ಸೇವಾ ಭದ್ರತೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಅದರ ಸಂಪೂರ್ಣ ವಿವರ ನೀಡುವುದು? | ಪ್ರಸ್ತುತ ಯಾವುದೇ ಪ್ರಸ್ತಾವನೆ ಸರ್ಕಾರ ಮುಂದಿರುವುದಿಲ್ಲ. |

**ಸಂಖ್ಯೆ:** ಅಪಜೀ 218 ಇಪಿಸಿ 2026

**(ರಾಮಲಿಂಗಾರೆಡ್ಡಿ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

ಅನುಬಂಧ-1

| Sl No | Regional Office | Total No of Industri | Local Bodies | Commercial and InfraStructure | Mines | Stone Crusher | Residence/ Apartments |
|---|---|---|---|---|---|---|---|
| | | | | | | | |
| 1 | Kolar | 849 | 06 | 00 | 00 | 44 | 03 |
| 2 | Kodagu | 309 | 04 | 135 | 00 | 30 | 08 |
| 3 | Gadag | 184 | 09 | 00 | 00 | 52 | 00 |
| 4 | Vijayanagara | 443 | 08 | 20 | 48 | 171 | 04 |
| 5 | Dakshina kannada | 1084 | 14 | 42 | 00 | 80 | 298 |
| 6 | Uttara kannada | 260 | 13 | 33 | 00 | 30 | 08 |
| 7 | Udupi | 972 | 06 | 73 | 00 | 54 | 45 |
| 8 | Chikkamagalur | 293 | 09 | 07 | 00 | 60 | 02 |
| 9 | Vijayapura | 396 | 06 | 07 | 00 | 111 | 34 |
| 10 | Koppal | 898 | 10 | 09 | 09 | 125 | 00 |
| 11 | Hassan | 562 | 08 | 00 | 00 | 137 | 00 |
| 12 | Yadgir | 196 | 04 | 05 | 00 | 26 | 00 |
| 13 | Bagalkot | 354 | 17 | 01 | 43 | 39 | 00 |
| 14 | Dharwad | 799 | 06 | 34 | 00 | 99 | 05 |
| 15 | Davangere | 385 | 07 | 07 | 03 | 59 | 00 |
| 16 | Shivamogga | 1132 | 11 | 74 | 00 | 210 | 19 |
| 17 | Raichur | 580 | 13 | 00 | 03 | 39 | 00 |
| 18 | Mysuru | 2162 | 08 | 395 | 08 | 48 | 75 |
| 19 | Chamarajanagar | 130 | 05 | 06 | 00 | 51 | 01 |
| 20 | Chikkaballapura | 317 | 06 | 10 | 00 | 90 | 00 |
| 21 | Chitradurga | 835 | 06 | 28 | 81 | 106 | 00 |
| 22 | Belagavi | 1457 | 38 | 32 | 28 | 363 | 293 |
| 23 | Tumakur | 899 | 11 | 02 | 07 | 93 | 01 |
| 24 | Ballari | 529 | 08 | 00 | 40 | 35 | 00 |
| 25 | Bangalore South | 816 | 06 | 06 | 00 | 63 | 00 |
| 26 | Mandya | 344 | 08 | 09 | 00 | 93 | 05 |
| 27 | Haveri | 239 | 08 | 01 | 00 | 65 | 02 |
| 28 | Bidar | 169 | 07 | 00 | 00 | 39 | 00 |
| 29 | Kalaburagi | 814 | 09 | 00 | 11 | 94 | 01 |
| 30 | Bangalore(Rural) | 1603 | 06 | 90 | 00 | 43 | 76 |
| 31 | Bangalore(Urban) | 10473 | 18 | 1562 | 00 | 150 | 2625 |
| | **Grand Total** | **30483** | **295** | **2588** | **281** | **2699** | **3505** |

STAFF STRENGTH OF KARNATAKA STATE POLLUTION CONTROL BOARD AS ON 01.08.2026 (CADRE WISE FIGURES)

| Sl No | Designation | Cadre | Total Sanctioned Strength | Total Working Strength | Vacancy |
|---|---|---|---|---|---|
| | **TECHNICAL** | | | | |
| 1 | Manager IT | A | 1 | 1 | 0 |
| 2 | Chief Environmental Officer | A | 3 | 2 | 1 |
| 3 | Senior Environmental Officer | A | 20 | 16 | 4 |
| 4 | Environmental Officer | A | 58 | 55 | 3 |
| 5 | Deputy Environmental Officer | A | 52 | 23 | 29 |
| 6 | Assistant Environmental Officer | B | 144 | 15 | 129 |
| | **TOTAL** | | **278** | **112** | **166** |
| | **SCIENTIFIC** | | | | |
| 7 | Chief Scientific Officer | A | 2 | 0 | 2 |
| 8 | Senior Scientific Officer | A | 4 | 1 | 3 |
| 9 | Scientific Officer | A | 15 | 4 | 11 |
| 10 | Deputy Scientific Officer | B | 15 | 3 | 12 |
| 11 | Assistant Scientific Officer | B | 34 | 16 | 18 |
| 12 | Scientific Assistant | C | 51 | 2 | 49 |
| 13 | Senior Field Assistant | C | 4 | 4 | 0 |
| 14 | Field Assistant | C | 17 | 5 | 12 |
| | **TOTAL** | | **142** | **35** | **107** |
| | **NON TECHNICAL** | | | | |
| 15 | Administrative Officer | A | 1 | 0 | 1 |
| 16 | Accounts Officer | A | 1 | 1 | 0 |
| 17 | Law Officer | A | 1 | 1 | 0 |
| 18 | Assistant Executive Engineer | A | 2 | 2 | 0 |
| 19 | Law Assistant | B | 6 | 2 | 4 |
| 20 | Assistant Horticulture Officer | B | 1 | 1 | 0 |
| 21 | Assistant Administrative officer | B | 21 | 11 | 10 |
| 22 | Superintendent | B | 24 | 7 | 17 |
| 23 | Public Relation Officer | C | 1 | 1 | 0 |
| 24 | Assistant Statistical Officer | C | 1 | 0 | 1 |
| 25 | Librarian | C | 1 | 0 | 1 |
| 26 | Junior Engineer | C | 1 | 1 | 0 |
| 27 | First Division Assistant | C | 41 | 33 | 8 |
| 28 | Stenographer | C | 6 | 2 | 4 |
| 29 | Senior Data Entry Operator | C | 9 | 0 | 9 |
| 30 | Data Entry Operator | C | 16 | 10 | 6 |
| 31 | Junior Data Entry Operator | C | 20 | 0 | 20 |
| 32 | Second Division Assistant | C | 68 | 5 | 63 |
| 33 | Driver Grade -A | C | 4 | 2 | 2 |
| 34 | Driver Grade-B | C | 13 | 8 | 5 |
| 35 | Driver | C | 15 | 0 | 15 |
| 36 | Office Assistant | D | 12 | 7 | 5 |
| 37 | Attender | D | 19 | 5 | 14 |
| 38 | Peon/Watchman | D | 19 | 3 | 16 |
| | **TOTAL** | | **303** | **102** | **201** |
| | **GRAND TOTAL** | | **723** | **249** | **474** |

* Above posts include direct recruitment, promotion and deputation posts